# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಪೂರ್ವ) ವಲಯ

## ವಾರ್ಡ್ ಸಂ ಖ್ಯೆ:110 ಸಂಪಂಗಿರಾಮನಗರ ವಾರ್ಡಿನಲ್ಲಿ ದಿನಾಂಕ:16-01-2021 ರಂದು ನಡೆದ ಸಭೆಯ ನಡವಳಿಗಳು

ಮಾನ್ಯ ಆಯುಕ್ತರು ಬಿಬಿಎಂಪಿ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/2020-21 ದಿನಾಂಕ:21-09-2020 ರ ಆದೇಶದಂತೆ ದಿನಾಂಕ:16-01-2021 ರಂದು ವಾರ್ಡ್ ಸಂಖ್ಯೆ:110 ಸಮಪಂಗಿರಾಮನಗರ, ಹಳೆ ಪಲ್ಲವಿ ಟಾಕೀಸ್ ಪಕ್ಕ, ರಾಜಾರಾಮ್ ಮೋಹನ್‌ರಾಯ್ ರಸ್ತೆ, ಬೆಂಗಳೂರು) ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

### ಸಭೆಗೆ ಹಾಜರಿದ್ದವರು

| ಕ್ರಮ ಸಂಖ್ಯೆ: | ಹೆಸರು | ಸಮಿತಿ ಸಭೆಯ |
|---|---|---|
| 1 | ಡಾ.ವಿ,ಶಿವೇಗೌಡ | ಆಧ್ಯಕ್ಷರು /ನೋಡಲ್ ಆರೋಗ್ಯ ವೈದ್ಯಾಧಿಕಾರಿ (ಸಿ.ವಿ.ರಾಮನ್‌ನಗರ ವಿಭಾಗ) |
| 2 | ಶ್ರೀ. ಡಿ.ಎನ್.ರಾಜಶೇಖರಮೂರ್ತಿ | ಕಾರ್ಯದರ್ಶಿ ಸಹಾಯಕ ಅಭಿಯಂತರರು |
| 3 | ಶ್ರೀ.ಚಂದನ್ | ಸಹಾಯಕ ಅಭಿಯಂತರರು |
| 4 | ಶ್ರೀ.ಬಿ.ಎನ್.ಲಕ್ಷ್ಮಿನಾರಾಯಣ | ಕೆಲಸ ಪರಿವೀಕ್ಷಕರು |
| 5 | ಶ್ರೀ.ನಾಗೇಂದ್ರ | ಕಿರಿಯ ಅಭಿಯಂತರರು (ಬೆಸ್ಕಾಂ) |
| 6 | ಶ್ರೀ.ಮನೋಜ್ | ಕಿರಿಯ ಆರೋಗ್ಯ ಪರಿವೀಕ್ಷಕರು |
| 7 | ಶ್ರೀ.ಬಾಲಕೃಷ್ಣ | ಕಂದಾಯ ಪರಿವೀಕ್ಷಕರು |
| 8 | ಶ್ರೀ.ಕಮಲ್ | ಕಂದಾಯ ವಸೂಲಿಗಾರರು |
| 9 | ಶ್ರೀ.ತಿಮ್ಮಪ್ಪ | ಅರಣ್ಯ ಇಲಾಖೆ (DYR) |
| 10 | ಶ್ರೀಮತಿ. ಮಂಜುಳ | ತೋಟಗಾರಿಕೆ ಪರಿವೀಕ್ಷಕರು |
| 11 | ಶ್ರೀ.ಶ್ರೀನಿವಾಸ | ಪಶುಇಲಾಖೆ ಪರಿವೀಕ್ಷಕರು |
| 12 | ಶ್ರೀ.ಚಿಕ್ಕಣ | ಕಿರಿಯ ಅಭಿಯಂತರರು (ಬೆಸ್ಕಾಂ) |
| 13 | ಶ್ರೀ.ಗೋಪಾಲ ರೆಡ್ಡಿ | ಸಹಾಯಕ ಅಭಿಯಂತರರು ಸ್ಮಾರ್ಟ್ ಸಿಟಿ |
| 14 | ಶ್ರೀ.ಹಸುರೈ | BWSSB ಪರಿವೀಕ್ಷಕರು |
| 15 | ಶ್ರೀ.ಪ್ರಕಾಶ್ ನಿದ್ದೂಗಡಿ | ಎನ್.ಜಿ.ಓ |
| 16 | ಶ್ರೀ.ರಾಯಣ್ಣ | ವಾರ್ಡ್ ಮಾರ್ಷಲ್ |
| 17 | ಶ್ರೀ.ಗೋಪಾಲ್ | ವಾರ್ಡ್ ಮಾರ್ಷಲ್ |

ದಿನಾಂಕ:16-01-2021 ರಂದು ಮಧ್ಯಾಹ್ನ 2.30 ಗಂಟೆಗೆ ನಡೆಸಲಾದ ವಾರ್ಡ್ ಮಟ್ಟದ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಮತ್ತು ಅಭಿವೃದ್ಧಿ ಕಾಮುಗಾರಿಗಳನ್ನು ನಿರ್ವಹಿಸುವ ಸಂಬಂಧ ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲಾಗಿ ಮೊದಲಿಗೆ ಹಾಜರಿದ್ದ. ಅಧ್ಯಕ್ಷರಿಗೆ ಸ್ವಾಗತವನ್ನು ಕೋರುತ್ತಾ, ಹಾಗೂ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ ವರ್ಗದವರಿಗೆ ಮತ್ತು ಸ್ಥಳೀಯ ನಾಗರಿಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

Scanned by CamScanner

1. ವಾರ್ಡ್ 110ರ ಸಂಪಂಗಿರಾಮನಗರದಲ್ಲಿ ಇರುವ Transformer ಹತ್ತಿರ ಕಸವನ್ನು ತೆರವುಗೊಳಿಸಿ ಸದರಿ ಸ್ಥಳದಲ್ಲಿ ಕಾಂಕ್ರೀಟ್‌ನ್ನು ಹಾಕಲು ಸೂಚಿಲಾಗಿತ್ತು, ಆದರೂ ಸಹ ಸದರಿ ಸ್ಥಳಗಳಲ್ಲಿ ಕಸ ಮತ್ತು ಕಾಂಕ್ರೀಟ್‌ನ್ನು ಹಾಕಿರುವುದಿಲ್ಲ ಎಂದು ಮತ್ತೊಮ್ಮೆ ನೋಡಲ್ ಅಧಿಕಾರಿಗಳು ಸೂಚಿಸಿದರು.

   ಕ್ರಮ :- AEE (BESCOM) ರವರಿಗೆ ಸದರಿ ವಿಷಯದ ಬಗ್ಗೆ ಕ್ರಮ ವಹಿಸಲು ಸೂಚಿಸಲಾಯಿತು.

2. ವಾರ್ಡ್ 110 ರ ಸೆಂಟ್‌ಜಾನ್ಸ್ ರಸ್ತೆ ಮತ್ತು ಈಡನ್ ಪಾರ್ಕ್ ಹತ್ತಿರ ಬೀದಿ ದೀಪಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿರುವುದಿಲ್ಲ ಎಂದು ತಿಳಿಸಿರುತ್ತಾರೆ.

   ಕ್ರಮ :- AEE (ಸ್ಟ್ರೀಟ್ ಲೈಟ್) ರವರಿಗೆ ಸದರಿ ವಿಷಯದ ಬಗ್ಗೆ ಕ್ರಮ ವಹಿಸಲು ಸೂಚಿಸಲಾಯಿತು.

3. ವಾರ್ಡ್ 110ರಲ್ಲಿ ಅಲಿ ಆಸ್ಕರ್ ರಸ್ತೆ ಮತ್ತು ಕಮರ್ಷಿಯಲ್ಲ ಸ್ಟ್ರೀಟ್ ರಸ್ತೆಗಳಲ್ಲಿರುವ ಪೈಪುಗಳನ್ನು BWSSB ರವರು ತೆರವುಗೊಳಿಸಿದ್ದಾರೆ.

4. ವಾರ್ಡ್ 110ರಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚಲು ಹಾಗೂ ಗುಣಮಟ್ಟದ ಕಾಮಗಾರಿಯನ್ನು ಕೈಗೊಳ್ಳಲು ನೋಡೆಲ್ ಅಧಿಕಾರಿಯವರು ಕೋರಿದರು

   ಕ್ರಮ :- AE ರವರಿಗೆ ಸದರಿ ವಿಷಯದ ಬಗ್ಗೆ ಕ್ರಮ ವಹಿಸಲು ಸೂಚಿಸಲಾಯಿತು.

5. ವಾರ್ಡ್ 110ರ ದೇವಾಂಗ ಸಭಾ ರಸ್ತೆಯಲ್ಲಿರುವ ಮೀನಿನ ಅಂಗಡಿಯನ್ನು ಮುಚ್ಚಲು ನೋಡಲ್ ಅಧಿಕಾರಿಯವರು ಸೂಚಿಸಿದರು.

   ಕ್ರಮ :- ಪಶು ಇಲಾಖೆಯವರಿಗೆ ಸದರಿ ವಿಷಯದ ಬಗ್ಗೆ ಕ್ರಮ ವಹಿಸಲು ಸೂಚಿಸಲಾಯಿತು.

6. ವಾರ್ಡ್ 110 ರ ಎಲ್ಲಾ ಪಾರ್ಕ್‌ಗಳನ್ನು ಸ್ವಚ್ಚಗೊಳಿಸಿಲು ಹಾಗೂ ಪಾರ್ಕ್‌ಗಳಲ್ಲಿರುವ ದೀಪಗಳನ್ನು ಕಾರ್ಯನಿರ್ವಹಿಸುವಂತೆ ಕ್ರಮ ಕೈಗೊಳ್ಳುವಂತೆ ನೋಡೆಲ್ ಅಧಿಕಾರಿಯವರು ಸೂಚಿಸಿದರು.

   ಕ್ರಮ :- ತೋಟಗಾರಿಕೆಯವರಿಗೆ ಸದರಿ ವಿಷಯದ ಬಗ್ಗೆ ಕ್ರಮ ವಹಿಸಲು ಸೂಚಿಸಲಾಯಿತು.

7. ವಾರ್ಡ್ 110ರಲ್ಲಿ ಮುಂದಿನ ಸಭೆ ಒಳಗೆ ಗಿಡಗಳನ್ನು ನೆಟ್ಟಿರುವ ಬಗ್ಗೆ ಪೂರ್ಣ ವಿವರಗಳನ್ನು ನೀಡಲು ನೋಡೆಲ್ ಅಧಿಕಾರಿಯವರು ಸೂಚಿಸಿದರು

   ಕ್ರಮ :-ಅರಣ್ಯ ಅಧಿಕಾರಿಯವರಿಗೆ ರವರಿಗೆ ಸದರಿ ವಿಷಯದ ಬಗ್ಗೆ ಕ್ರಮ ವಹಿಸಲು ಸೂಚಿಸಲಾಯಿತು.

8. ವಾರ್ಡ್ 110ರ ಸಾರ್ವಜನಿಕ ಸ್ಥಳಗಳಲ್ಲಿ ಕಸವನ್ನು ಬಿಸಾಡುವವರಿಗೆ ದಂಡವನ್ನು ವಿಧಿಸಲು ಮರ್ಷಲ್‌ಗಳಿಗೆ ಸೂಚಿಸಿದರು.

   ಕ್ರಮ :-ಮರ್ಷಲ್‌ಗಳಿಗೆ ಸದರಿ ವಿಷಯದ ಬಗ್ಗೆ ಕ್ರಮ ವಹಿಸಲು ಸೂಚಿಸಲಾಯಿತು.

9. ವಾರ್ಡ್ 110ರ black spot ಗಳನ್ನು ಸ್ವಚ್ಚಗೊಳಿಸಿ ಸದರಿ ಸ್ಥಳಗಳಲ್ಲಿ ಬಣ್ಣ ಬಳಿಯಲು ನೋಡೆಲ್ ಅಧಿಕಾರಿಯವರು ಸೂಚಿಸಿದರು.

   ಕ್ರಮ :- JHI ರವರಿಗೆ ಸದರಿ ವಿಷಯದ ಬಗ್ಗೆ ಕ್ರಮ ವಹಿಸಲು ಸೂಚಿಸಲಾಯಿತು.

Scanned by CamScanner

10. ವಾರ್ಡ್ 110ರ 2ನೇ 'ಬಿ' ಮುಖ್ಯರಸ್ತೆಯ 12ನೇ ಕ್ರಾಸ್‌ಗಳಲ್ಲಿ ಸ್ಯಾನಿಟರಿ ಲೈನ್‌ಗಳು ತುಂಬ ಹಳೆಯದಾಗಿದ್ದು, ಅದನ್ನು ಹೊಸ ಲೈನ್‌ನ್ನು ಅಳವಡಿಸಲು ಸಾರ್ವಜನಿಕರು ನೋಡೆಲ್ ಅಧಿಕಾರಿಯವರಿಗೆ ಕೋರಿದರು.

ಕ್ರಮ :- AEE (BWSSB) ರವರಿಗೆ ಸದರಿ ವಿಷಯದ ಬಗ್ಗೆ ಕ್ರಮ ವಹಿಸಲು ಸೂಚಿಸಲಾಯಿತು

11. ವಾರ್ಡ್ 110ರ 20ನೇ 'ಎ' ಕ್ರಾಸ್ ಕರಗಪ್ಪ ಗಾರ್ಡ್‌ನ್ ಮತ್ತು 1ನೇ ಕ್ರಾಸ್‌ಲ್ಲಿ ಸ್ಯಾನಿಟರಿ ಲೈನ್‌ಗಳು ತುಂಬ ಹಳೆಯದಾಗಿದ್ದು, ಅದನ್ನು ಹೊಸ ಲೈನ್‌ನ್ನು ಅಳವಡಿಸಲು ಸಾರ್ವಜನಿಕರು ನೋಡೆಲ್ ಅಧಿಕಾರಿಯವರಿಗೆ ಕೋರಿದರು.

ಕ್ರಮ :- AEE (BWSSB) ರವರಿಗೆ ಸದರಿ ವಿಷಯದ ಬಗ್ಗೆ ಕ್ರಮ ವಹಿಸಲು ಸೂಚಿಸಲಾಯಿತು

ಅಂತಿಮವಾಗಿ ಮೇಲ್ಕಂಡ ಎಲ್ಲಾ ವಿಷಯವನ್ನು ಚರ್ಚಿಸಲಾಗಿ ಹಾಗೂ ಚರ್ಚಿಸಿದ ವಿಷಯಗಳ ಬಗ್ಗೆ ಅಧಿಕಾರಿಗಳು ಮುಂದಿನ ವಾರ್ಡ್ ಸಮಿತಿ ಸಭೆಗೆ ಸಂಬಂಧಿಸಿದ ಅಧಿಕಾರಿಗಳು ಕೈಗೊಂಡ ಕ್ರಮದ ಬಗ್ಗೆ ವರದಿ ಪೂರ್ಣಗೊಂಡಿರುವ ಬಗ್ಗೆ ಸಭೆಯಲ್ಲಿ ತಿಳಿಸುವುದು. ನೋಡಲ್ ಅಧಿಕಾರಿಗಳ ಅಪ್ಪಣೆ ಮೇರೆಗೆ ಸಹಾಯಕ ಅಭಿಯಂತರರು ಮಧ್ಯಾಹ್ನ 4.00 ವರೆಗೆ ಸಭೆ ಮುಕ್ತಾಯಗೊಳಿಸಲಾಯಿತು.

ವಾರ್ಡ್ ಕಾರ್ಯದರ್ಶಿ
ಸಹಾಯಕ ಅಭಿಯಂತರರು

18/01/2021.
ನೋಡೆಲ್ ಅಧಿಕಾರಿ
ವಾರ್ಡ್ ಸಂಖ್ಯೆ:110. (ಸಂಪಂಗಿರಾಮನಗರ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಗಳನ್ನು:

1) ಮಾನ್ಯ ಆಡಳಿತಗಾರರ ಆಪ್ತ ಕಾರ್ಯದರ್ಶಿ ರವರ ಅವಗಾಹನೆಗೆ ಕಳುಹಿಸಲಾಗಿದೆ.
2) ಮಾನ್ಯ ಆಯುಕ್ತರು ರವರ ಆಪ್ತ ಕಾರ್ಯದರ್ಶಿ ರವರ ಅವಗಾಹನೆಗೆ ಕಳುಹಿಸಲಾಗಿದೆ
3) ಮಾನ್ಯ ವಿಶೇಷ ಆಯುಕ್ತರು (ಆಡಳಿತ) ಆಪ್ತ ಕಾರ್ಯದರ್ಶಿ ರವರ ಅವಗಾಹನೆಗೆ ಕಳುಹಿಸಿದೆ.
4) ಜಂಟಿ ಆಯುಕ್ತರು (ಪೂರ್ವ) ರವರ ಅವಗಾಹನೆಗೆ ಕಳುಹಿಸಲಾಗಿದೆ
5) ಮುಖ್ಯ ಅಭಿಯಂತರರು (ಪೂರ್ವ) ರವರ ಅವಗಾಹನೆಗೆ ಕಳುಹಿಸಲಾಗಿದೆ
6) ಕಾರ್ಯಪಾಲಕ ಅಭಿಯಂತರರು (ಶಿವಾಜಿನಗರ) ವಿಭಾಗ ರವರ ಅವಗಾಹನೆಗೆ ಸಲ್ಲಿಸಿದೆ.
7) ಸಹಾಯಕ ಕಾರ್ಯಪಾಲಕ ಅಭಿಯಂತರರು (ವಸಂತನಗರ ) ರವರ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
8) ಆರೋಗ್ಯ ವೈದ್ಯಾಧೀಕಾರಿ (ಶಿವಾಜಿನಗರ) ರವರ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
9) ಸಹಾಯಕ ಕಂದಾಯ ಅಧಿಕಾರಿ (ವಸಂತನಗರ) ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
10) ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೀದಿ ದೀಪ ಪೂರ್ವ) ರವರ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
11) ಸಮಿತಿಯ ಎಲ್ಲಾ ಸದಸ್ಯರ ಅವಗಾಹನೆಗೆ ಕಳುಹಿಸಲಾಗಿದೆ.
12) ಕಛೇರಿ ಕಡತಕ್ಕೆ.

Scanned by CamScanner